ವಿದ್ಯಾರ್ಥಿಗಳನ್ನು ಆಕರ್ಷಿಸುತ್ತದೆ. ದಕ್ಷಿಣಕನ್ನಡ ಜಿಲ್ಲೆಯ ಕಾಲೇಜುಗಳಲ್ಲಿ ಈ ಹಿಂದೀ ಶಿಕ್ಷಣ ಬೆಳೆಯುತ್ತಿರುವ ವೇಗ ಭಯ ಮೂಡಿಸುತ್ತದೆ. ಹತ್ತು ವರ್ಷಗಳ ಮಾತೃ ಭಾಷಾಕಲಿಕೆಯೊಡನೆ ಮೂರು ವರ್ಷಗಳ ಸಂಸ್ಕೃತ ಶಿಕ್ಷಣವನ್ನು ಸಮೀಕರಿಸಿ ಅದನ್ನು ಮಾತೃಭಾಷೆಯ ಸ್ಥಾನದಲ್ಲಿರಿಸಿರುವುದರಿಂದ ಸಂಸ್ಕೃತ ಮೈಮುರಿಯದೆ ಅಂಕಗಳಿಸಲು ಒಂದು ಅಪರೂಪದ ಸಾಧನವಾಗಿದೆ. ಕಾಲೇಜುಗಳಲ್ಲಿಯ ಸಂಸ್ಕೃತದ ಮಟ್ಟವಾದರೂ ಇದೇ ಬಗೆಯದಾಗಿರುತ್ತದೆ. ಬೆಂಗಳೂರು ನಗರದ ಕಾಲೇಜುಗಳಲ್ಲಿ ಕನ್ನಡದ ಶಿಕ್ಷಣವೇ ನಿಂತುಹೋಗುವ ಚಿಹ್ನೆಗಳು ಸ್ಪಷ್ಟವಾಗಿ ಕಾಣಿಸುತ್ತಿವೆ. ಸಂಸ್ಕೃತ ಅಂಕಗಳ ಜಿಂಕೆಯಾಗಿದೆ. ಇಂಗ್ಲಿಷಂತೂ ಕಡ್ಡಾಯದ ಭಾಷೆಯಾಗಿಯೇ ಇದೆ. ಪಿ.ಯು.ಸಿ. ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ ಇಂಗ್ಲಿಷನ್ನು ಐಚ್ಛಿಕ ಭಾಷೆಯೆಂದು ಪರಿಗಣಿಸಿದ್ದರೂ, ಕಾಲೇಜಿನವರು ಇಂಗ್ಲಿಷನ್ನು ಕಡ್ಡಾಯ ಮಾಡಿಟ್ಟುಕೊಂಡಿದ್ದಾರೆ. ಪ್ರವೇಶದ ಜಾಹೀರಾತುಗಳಲ್ಲಿ ಇಂಗ್ಲಿಷ್ ಕಡ್ಡಾಯವೆಂದೆ ಘೋಷಿಸುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ಇಂಗ್ಲಿಷ್ ತಮಗೆ ಬೇಡವೆಂದರೂ ಬಿಡುವಂತಿಲ್ಲ. ಒಂದು ಕ್ರಮವನ್ನೇ ಅಸ್ತಿತ್ವಕ್ಕೆ ಬರದಂತೆ ನೋಡಿಕೊಳ್ಳುವಲ್ಲಿ ನಮ್ಮ ಶಿಕ್ಷಣ ಸಂಸ್ಥೆಗಳು ಯಶಸ್ವಿಯಾಗಿವೆ. ಒಟ್ಟಿನಲ್ಲಿ ಕನ್ನಡ ಈ ಭಾಷೆಗಳೊಡನೆ ಸ್ಪರ್ಧಿಸಬೇಕಾದ ಸ್ಥಿತಿಯನ್ನು ನಾವು ನಮ್ಮ ಶಿಕ್ಷಣ ಕ್ರಮದಲ್ಲಿ ನೋಡುತ್ತಿದ್ದೇವೆ. ಕರ್ನಾಟಕದ ಶಿಕ್ಷಣ ಕ್ರಮದಲ್ಲಿ ಕನ್ನಡ ಪ್ರಥಮ, ಪ್ರಧಾನ, ಕಡ್ಡಾಯ ಆಗಿರುವಂತೆ ನೋಡಿಕೊಳ್ಳಬೇಕಾದದ್ದು ಸರ್ಕಾರದ ಕರ್ತವ್ಯವಾಗಿದೆ. ಆದರೆ ಸರ್ಕಾರ ಈ ವಿಷಯದಲ್ಲಿ ಗಮನವಹಿಸಿಲ್ಲ. ಬದಲಾಗಿ ಅದು ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ ಎಂದೇ ಹೇಳಬೇಕು.

ಸೆಕೆಂಡರಿ ಶಾಲಾಶಿಕ್ಷಣವನ್ನು ಅನೇಕ ಭಾಷೆಗಳಲ್ಲಿ ನೀಡುತ್ತಿರುವ ರಾಜ್ಯ ಕರ್ನಾಟಕ ಒಂದೇ ಎಂದು ತೋರುತ್ತದೆ. ಪಶ್ಚಿಮ ಬಂಗಾಳದಂಥ ಇತರ ಕೆಲವು ರಾಜ್ಯಗಳಲ್ಲಿ ಹೀಗಿದ್ದರೂ ಅದು ಕರ್ನಾಟಕದಷ್ಟು ಪರಿಣಾಮಕಾರಿಯಾಗಿಲ್ಲ. ಅಲ್ಲದೆ ಅಲ್ಲಿ ರಾಜ್ಯಭಾಷೆಯನ್ನು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಕಲಿಸಲಾಗುತ್ತದೆ. ಇಲ್ಲಿ ಕರ್ನಾಟಕದಲ್ಲಿ ಇತರ ಭಾಷೆಗಳಿಗೆ ಅವಕಾಶ ಕಲ್ಪಿಸಲು ಇರುವ ಉತ್ಸಾಹ ಕನ್ನಡ ಕಲಿಸುವುದಕ್ಕೆ ಕಾಣಿಸುವುದಿಲ್ಲ. ಒಂದೇ ಉದಾಹರಣೆ ಕೊಡಬಹುದಾದರೆ, ನಮ್ಮ ಉರ್ದು ಶಾಲೆಗಳದ್ದು. ಈ ಶಾಲೆಗಳನ್ನು ದ್ವೀಪಗಳಂತೆ ನಡೆಸುತ್ತ ಪ್ರತ್ಯೇಕತೆಯನ್ನು ಪೋಷಿಸಲಾಗುತ್ತಿದೆ. ಉರ್ದುಶಾಲೆಗಳಲ್ಲಿ ಕನ್ನಡ ಕಲಿಸಬೇಕೆಂದೂ, ಉರ್ದು ವಿದ್ಯಾರ್ಥಿಗಳನ್ನು ಮುಖ್ಯ ಪ್ರವಾಹದೊಡನೆ ಬೆರೆಸಬೇಕೆಂದೂ ಬಹಳ ಕಾಲದಿಂದ ಮುಸ್ಲಿಮ್ ಧುರೀಣರೇ ಒತ್ತಾಯಿಸುತ್ತಿದ್ದಾರೆ. ಹಳೆಯ ಪ್ರಜಾಪ್ರತಿನಿಧಿ ಸಭೆ ನಡೆವಳಿಕೆಗಳನ್ನು ನೋಡಿದರೆ ಇದು ಸ್ಪಷ್ಟವಾಗಿ ತಿಳಿಯುತ್ತದೆ. ಅಲ್ಲದೆ ಇಂದಿನ ಮುಸ್ಲಿಮ್ ನಾಯಕರೂ ಇದನ್ನು ಹೇಳುತ್ತಿದ್ದಾರೆ. ಆದರೂ ಸರ್ಕಾರ ಈ ವಿಷಯದಲ್ಲಿ ಅಗತ್ಯ ನಿಲುವನ್ನು ತಾಳಿಲ್ಲ. ಉರ್ದುಶಾಲೆಗಳನ್ನು ಮುಸುಕಿನಲ್ಲೇ ಇಡಲಾಗಿದೆ. ತಮಿಳು, ಮರಾಟಿ, ತೆಲುಗು ಮುಂತಾದ ಇತರ ಭಾಷೆಗಳ ಶಾಲೆಗಳಲ್ಲಿ ಕನ್ನಡವನ್ನು ಸರಿಯಾಗಿ ಸ್ಥಾಪಿಸುವಲ್ಲಿ ಸರ್ಕಾರ ವಿಫಲಗೊಂಡಿದೆ. ಮೂರನೆ ಭಾಷೆಯನ್ನು ಮರಾಟಿಗರು ಗಲಾಟೆ ಮಾಡುತ್ತಾರೆ ಎಂಬ ಕಾರಣದಿಂದ ಅ–ಪರೀಕ್ಷಾ ವಿಷಯವನ್ನಾಗಿ ಮಾಡಲಾಯಿತು. ಭಾಷಾ ಅಲ್ಪ ಸಂಖ್ಯಾತರು ಕನ್ನಡನಾಡಿನಲ್ಲಿ ಶಿಕ್ಷಣ ಧೋರಣೆಯನ್ನು ರೂಪಿಸುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಸರ್ಕಾರ ಶಿಕ್ಷಣ ವಿಷಯಗಳನ್ನು ರಾಜಕೀಯ ದೃಷ್ಟಿಕೋನದಿಂದ ನೋಡುವುದೇ ಇದಕ್ಕೆ ಕಾರಣ.

ಕನ್ನಡವನ್ನು ಅಧಿಕೃತ ಆಡಳಿತ ಭಾಷೆಯೆಂದು ಘೋಷಿಸಿದ್ದರೂ, ಅದು ಕಾರ್ಯಗತವಾಗಿಲ್ಲ.